ಪದಬಂಧ



ಎಡದಿಂದ ಬಲಕ್ಕೆ:

1. ದಾಸೀಜನರನ್ನು ಕಂಡರೇ ಏಕಿಂಥ ತಿರಸ್ಕಾರ ? (4)
3. ಕುಬೇರನ ಮಗನೇ ಹೌದು – ಇನ್ನೂ ಬಾಲಕ (3)
4. ಸಂಕಟ ತರುವಂತಿದ್ದ ಕೆಲಸ , ಸಂತಸದಲ್ಲಿ ಮುಕ್ತಾಯ (3)
6. ಕಾವಲು ನಿಂತವರ ಕಿವಿಗೆ ಸದಾ ಹಕ್ಕಿಗಳ ಚಿಲಿಪಿಲಿ (4)
8. ಆ ಶಹರದ ಸ್ಥಳ ಅನ್ಯ ರಾಷ್ಟ್ರ (4)
10. ಸುತ್ತಲೂ ಮಾತು ನಡೆದದ್ದು 'ತಕ್ಕಡಿ ಜೊತೆಗಿನ ತಿಂಗಳು ' (4)
12. ಪರಿಭವದ ಕಾಲದಲ್ಲೇ ಬಂತು ಶತ್ರುಸೈನ್ಯ (4)
16. ನಾಳಿದ್ದಿನ ಪೂಜೆಗೆ ಬೇಕು ತಾವರೆ (3)
17. ಪುಸ್ತಕ ನಾಶ ಮಾಡುವುದೆಂದರೆ ಮಹಾ ಪಾಪದ ಕೆಲಸ (3)
18. ಬೇರುಗಳನ್ನು ಕಿತ್ತು ಹಾಕಿದವ ಅಲೆಮಾರಿ, ಭಿಕ್ಷುಕ (4)

ಮೇಲಿಂದ ಕೆಳಕ್ಕೆ:

1. ಇದಾವ ಜೀವಿವರ್ಗ – ಸರ್ಪಗಳು ಸೇರಿದ್ದು ? (3)
2. ಕಾಸಿನ ಲೆಕ್ಕ ಮುಗಿವ ವೇಳೆಗೆ ಮುಂಜಾನೆ ಬಂದಾಯಿತು (3)
3. ಕಲಬೆರಕೆ ವಸ್ತುಗಳನ್ನು ಮಾರಿ ಮಾರಿ ಧನದೇವತೆಯಂತಾದ (3)
5. ವರ್ತನೆಯಂತೆ ಮಾರುತ್ತಿದ್ದಾರೆ – ಕಲಾಯದ ಲೋಹ (3)
6. ಕೆಟ್ಟುಹೋಗುವಂತೆ ಮಾಡಿತು – ಬರೀ ಕಹಿನುಡಿ (4)
7. ಕಷ್ಟಸಾಧ್ಯ ಕೆಲಸ – ಕಾಡಿನಲ್ಲಿ ಜೀವನ (4)
8. ಕಷ್ಟ ಪರಿಹರಿಸುವ ಪ್ರಯತ್ನದ ನವೀನ ಕ್ರಮ (4)
9. ಶತವಿಧ ಅಲಂಕಾರ ನಡೆದದ್ದು ಮಳೆಗಾಲದ ನಂತರದ ಋತು (4)
11. ಮಂಪರಿನ ಕಾಲದಲ್ಲಿ ಇದೆಂಥ ಅಳತೆ? (3)
13. ಕಳಪೆ ಜನರೇ ಇಲ್ಲ ಎಂದಿದ್ದಕ್ಕೇ ರೋಮಾಂಚನ (3)
14. ಅತಿ ಏನೂ ಇಲ್ಲ , ಸ್ವಲ್ಪ ಅಷ್ಟೆ (3)
15. ಪತಾಕೆ ಹಾರಿಸುವಾಗ ಸಿಡಿಸಲು ಕೋವಿ – ಬಂದೂಕು (3)

## 15-10-15ರ ಉತ್ತರಗಳು

ಎಡದಿಂದ ಬಲಕ್ಕೆ :

1. ಶತಪದ ; 3. ವಿಳಂಬ ; 4. ಡಾಮರ ; 6. ರತ್ನಾಕರ ;
7. ಬೆನಕ ; 9. ಸತತ ; 11. ಗುರಾಣಿ ; 13 ಪತನ ;
15. ಪ್ರಸಾಧನ ; 17. ವರುಣ ; 18. ಮರೆಸು ; 19. ವರ್ತಮಾನ

ಮೇಲಿಂದ ಕೆಳಕ್ಕೆ :

1. ಶಬರ ; 2. ದಡಾರ ; 3. ವಿಪಿನ ; 5. ರಜತ ;
7. ಬೆರಗು ; 8. ಕಣ್ಮಣಿ ; 9. ಸಲ್ಲಾಪ ; 10. ತಲ್ಲೀನ ;
12. ರಾಜೀವ ; 14. ತಣಿಸು ; 15. ಪ್ರಣವ ; 16. ನಮನ

# ಪ್ರಶ್ನಾಂಕಣ

## ಮಾರುವೇಷ-ಏನೇನು ಉದ್ದೇಶ?

'ಮಾರುವೇಷ' ಹಾಗೆಂದರೆ ಸತ್ಯವಲ್ಲದ ಲಕ್ಷಣ, ಆಕಾರ ಅಥವಾ ಸ್ವರೂಪದ ಪ್ರದರ್ಶನ. ಪ್ರಾಣಿ ಪ್ರಪಂಚದಲ್ಲಿ ಸರ್ವ ವರ್ಗಗಳ ಎಂದರೆ ಕೀಟ, ಮತ್ಸ್ಯ, ಮೃದ್ವಂಗಿ, ಉಭಯವಾಸಿ, ಹಕ್ಕಿ, ಸ್ತನಿ ಇತ್ಯಾದಿ ಎಲ್ಲ ವರ್ಗಗಳ ಜೀವಿಗಳಲ್ಲೂ ಹೇರಳ ಪ್ರಭೇದಗಳು ನಾನಾ ವಿಧ ಮಾರುವೇಷಗಳನ್ನು ಶಾಶ್ವತವಾಗಿ ಧರಿಸಿವೆ ಅಥವಾ ಅವಶ್ಯವಾದಾಗ ಮಾತ್ರ ಆ ಬಗೆಯ ಮಿಥ್ಯಾರೂಪಗಳನ್ನು ಪ್ರದರ್ಶಿಸುತ್ತವೆ. ಉದಾ: ತರಗೆಲೆಗಳನ್ನೇ ಹೋಲುವ ಚಿಟ್ಟೆ, ತೆರೆದ ರೆಕ್ಕೆಗಳಲ್ಲಿ ಗೂಬೆ ಕಣ್ಣುಗಳನ್ನು ಪ್ರದರ್ಶಿಸುವ ಪತಂಗ, ಸರ್ಪದಂತೆ ತಲೆ ಎತ್ತುವ ಮರಿಹುಳು (ಚಿತ್ರ: 3), ಹೂವಿನಂತೆ ಅರಳಿ ನಿಲ್ಲುವ ಮಿಡತೆ (ಚಿತ್ರ: 2), ಕೊಂಬೆಯಲ್ಲಿ ಮುರಿದು ನಿಂತ ರೆಂಬೆಯಂತೆಯೇ ಕಾಣುವ ಹಕ್ಕಿ (ಚಿತ್ರ :1), ಮರಳ ರಾಶಿಯ ಮೇಲೆ ಕಣ್ಣಿಗೇ ಬೀಳದಂತೆ ಉಳಿವ ಸರ್ಪ...... ಇತ್ಯಾದಿ.

ಅದೆಲ್ಲ ಸರಿ . ಹೇರಳ ಪ್ರಾಣಿಗಳು ಹೀಗೆ ಮಾರುವೇಷಗಳನ್ನು ಧರಿಸುವ ಉದ್ದೇಶಗಳು ಏನೇನು?

ಮಾರುವೇಷ ಧಾರಣೆಯ ಪ್ರಧಾನ ಉದ್ದೇಶಗಳು ಎರಡು: "ಆತ್ಮರಕ್ಷಣೆ ಮತ್ತು ಆಹಾರ ಗಳಿಕೆ ಎಂದರೆ ಯಶಸ್ವೀ ಬೇಟೆ". ಅದಕ್ಕಾಗಿಯೇ ಮಿಥ್ಯಾವೇಷ ಪ್ರದರ್ಶನದ ದ್ವಿವಿಧ ಪ್ರಮುಖ ತಂತ್ರಗಳು ಜೀವಲೋಕದಲ್ಲಿ ಬಳಕೆಯಲ್ಲಿವೆ.

ಶತ್ರುಗಳ ಅಥವಾ ಬೇಟೆಗಾರರ ಅಥವಾ ಬಲಿ ಪ್ರಾಣಿಗಳ ದೃಷ್ಟಿಗೆ ಸುಲಭವಾಗಿ ಗೋಚರವೇ ಆಗದಂತೆ ಉಳಿಯುವುದು ಮರುವೇಷ ತಂತ್ರದ ಮೊದಲ ಬಗೆ. ತಾವಿರುವ ಪರಿಸರದಲ್ಲೇ ಲೀನವಾಗಿ ಇತರರಿಗೆ ನೈಜರೂಪವನ್ನು ಕಿಂಚಿತ್ತೂ ತೋರದೆ ಉಳಿವ ತಂತ್ರ ಇದು. ಬೇಟೆಗಾರರು ಸುಲಭವಾಗಿ ಬೇಟೆಯಾಡಲು ಅಥವಾ ಬಲಿಪ್ರಾಣಿಗಳು ಬೇಟೆಗಾರರ ಅರಿವಿಗೇ ಬಾರದೆ ಸುರಕ್ಷಿತವಾಗಿ ಉಳಿಯಲು ಈ ತಂತ್ರ .

ಅಪಾಯ ಎದುರಾದೊಡನೆ ಬಲಿ ಪ್ರಾಣಿ ಕ್ಷಣಾರ್ಧದಲ್ಲಿ ಬೇರಾವುದೋ ಭಯಂಕರ ಪ್ರಾಣಿಯ ಅಥವಾ ನಿರ್ಜೀವಿಯ ಅಥವಾ ತ್ಯಾಜ್ಯ ವಸ್ತುವಿನ ರೂಪ ತಳೆದು ಶತ್ರುಗಳನ್ನು ಹಿಮ್ಮೆಟ್ಟಿಸುವ ಅಥವಾ ಅವುಗಳ ಲಕ್ಷ್ಯಕ್ಕೇ



ಬಾರದಂತಾಗುವ 'ಅನುಕರಣಾ ಕ್ರಮ' ಮಾರುವೇಷ ಧಾರಣೆಯ ಎರಡನೆಯ ತಂತ್ರ. ಸರ್ಪವೊಂದು ಎದುರಾದೊಡನೆ ಅದನ್ನೇ ಗಾಬರಿಗೊಳಿಸುವ ಗಾತ್ರ – ಆಕಾರ ತಾಳುವ ಕಪ್ಪೆ , ಶತ್ರು ಕಂಡೊಡನೆ ಭಾರೀ ಬಲೂನಿನಂತೆ ಉಬ್ಬಿ ನಿಲ್ಲುವ ಮೀನು , ಗಿಡ ಮರಗಳ ಎಲೆಗಳ ಮೇಲೆ ಹಕ್ಕಿ ಹಿಕ್ಕೆಯಂತೆ ಗೋಚರಿಸುವ ಕೀಟ .... ಇತ್ಯಾದಿ ಈ ತಂತ್ರದ ಉದಾಹರಣೆಗಳು. ಸ್ಪಷ್ಟವಾಗಿಯೇ ಈ ಕ್ರಮ ಆತ್ಮ ರಕ್ಷಣೆಗೆ ಮಾತ್ರ ಸಹಕಾರಿ.

ಆಶ್ಚರ್ಯ ಏನೆಂದರೆ ಕೆಲವಾರು ಸಸ್ಯಗಳೂ ಕೂಡ ಆಹಾರ ಗಳಿಕೆಗೆ , ಸ್ವ ರಕ್ಷಣೆಗೆ ಮತ್ತು ಯಶಸ್ವೀ ಪರಾಗ ಸ್ಪರ್ಶಕ್ಕೆ ಮಾರುವೇಷ ಧರಿಸುವ ಕ್ರಮ ಹೊಂದಿವೆ. ಅದೇ ಬೇರೊಂದು ವಿಸ್ಮಯ.

■ ಎನ್. ವಾಸುದೇವ್